# ಕರ್ನಾಟಕ ವಿಧಾನ ಪರಿಷತ್ತು

**ವಿಷಯ:** ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಶಾಸಕರ ಭವನ-1 ಮತ್ತು 5ರ ವ್ಯಾಪ್ತಿಗೆ ಬರುವ ಕೊಠಡಿಗಳು ಮತ್ತು ವರಾಂಡಗಳ ಸ್ವಚ್ಛತಾ ಹಾಗೂ ಯಾಂತ್ರೀಕೃತ ಮತ್ತು ಸ್ವಯಂಚಾಲಿತ, ನೈರ್ಮಲ್ಯತೆ ಹಾಗೂ ಭದ್ರತಾ ಕಾರ್ಯಗಳನ್ನು ನಿರ್ವಹಿಸಿರುವುದಕ್ಕೆ ಸಂಬಂಧಿಸಿದಂತೆ ಹಣ ಪಾವತಿಸುವ ಬಗ್ಗೆ.

******

**ಓದಲಾಗಿದೆ:**

1. ಪತ್ರ ಸಂಖ್ಯೆ:ಕವಿಪ/ಶಾಭ/758/ಬಿಖ/2021, ದಿನಾಂಕ:08.02.2024.
2. ಮೆ: ಏಷಿಯನ್ ಸೆಕ್ಯೂರಿಟಿ ಅಂಡ್ ಪರ್ಸನಲ್ ಅರೇಂಜ್‌ಮೆಂಟ್ಸ್, ಬೆಂಗಳೂರು, ಇವರ ಬಿಲ್ ಸಂಖ್ಯೆ:519, ದಿ:10.06.2024, ಮತ್ತು ಬಿಲ್ ಸಂಖ್ಯೆ 522, ದಿ:10.07.2024.
3. ಕಡತ ಸಂ:ಕವಿಪ:ಶಾಭ:919:ಬಿ.ಪಾ:2023-24, ಕಂಡಿಕೆ ಸಂಖ್ಯೆ:23ರಿಂದ 33 ರವರೆಗೆ.

**ಪ್ರಸ್ತಾವನೆ:**

ಓದಲಾಗಿರುವ ಕ್ರಮ ಸಂಖ್ಯೆ(1)ರಲ್ಲಿ ವಿಧಾನ ಪರಿಷತ್ತಿನ ಸಚಿವಾಲಯದ ಶಾಸಕರ ಭವನ-1 ಮತ್ತು 5 ರಲ್ಲಿ ಯಾಂತ್ರೀಕೃತ ಸ್ವಚ್ಛತಾ ಕಾರ್ಯನಿರ್ವಹಣೆ ಕಾರುಗಳ ಸ್ವಚ್ಛತೆ ಮತ್ತು ಭದ್ರತಾ ಕಾರ್ಯಗಳನ್ನು ನಿರ್ವಹಿಸಲು ದಿನಾಂಕ:01.01.2021 ರಿಂದ ಜಾರಿಗೆ ಬರುವಂತೆ ಮಾಡಿಕೊಳ್ಳಲಾಗಿರುವ ಕರಾರು ಒಪ್ಪಂದ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಂತೆ ಟೆಂಡರ್ ಪ್ರಕ್ರಿಯೆ ಮುಗಿದು ಹೊಸ ಗುತ್ತಿಗೆದಾರರನ್ನು ಆಯ್ಕೆ ಮಾಡುವವರೆಗೆ ಮೆ:ಏಷಿಯನ್ ಸೆಕ್ಯೂರಿಟಿ ಅಂಡ್ ಪರ್ಸನಲ್ ಅರೇಂಜ್‌ಮೆಂಟ್ಸ್, ನಂ.17/1, 2ನೇ ಮಹಡಿ, 1ನೇ ಕೆ ಬ್ಲಾಕ್, 11ನೇ ಕ್ರಾಸ್, ರಾಜಾಜಿನಗರ, ಬೆಂಗಳೂರು-560 010, ಇವರೊಂದಿಗೆ ಮುಂದುವರೆಸಲಾಗಿದೆ ಎಂದು ತಿಳಿಸಲಾಗಿರುತ್ತದೆ.

ಓದಲಾಗಿರುವ ಕ್ರಮ ಸಂಖ್ಯೆ: (2)ರಲ್ಲಿ ಮೆ:ಏಷಿಯನ್ ಸೆಕ್ಯೂರಿಟಿ ಅಂಡ್ ಪರ್ಸನಲ್ ಅರೇಂಜ್‌ಮೆಂಟ್ಸ್, ಬೆಂಗಳೂರು, ಇವರು ಮೇ-2024 ಮತ್ತು ಜೂನ್-2024ರ ಮಾಹೆಯಲ್ಲಿ ಒಬ್ಬರು ಸೂಪರ್‌ವೈಸರ್, 10 ಜನ ಸಫಾಯಿ ಕರ್ಮಚಾರಿಗಳು, 07 ಜನ ಭದ್ರತಾ ಸಿಬ್ಬಂದಿ, 27 ಜನ ಸ್ವಚ್ಛತಾಗಾರರು ಹೀಗೆ ಒಟ್ಟು 45 ನೌಕರರು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಶಾಸಕರ ಭವನ-1 ಮತ್ತು 5ರ ವ್ಯಾಪ್ತಿಗೆ ಬರುವ ಕೊಠಡಿಗಳು ಮತ್ತು ವರಾಂಡಗಳ ಸ್ವಚ್ಛತಾ ಕಾರ್ಯನಿರ್ವಹಣೆ, ಕಾರುಗಳ ಸ್ವಚ್ಛತೆ ಹಾಗೂ ಭದ್ರತಾ ಕಾರ್ಯಗಳನ್ನು ನಿರ್ವಹಿಸಿರುವುದಕ್ಕೆ ಸಂಬಂಧಿಸಿದಂತೆ ಸದರಿಯವರುಗಳಿಗೆ ವೇತನ ಪಾವತಿಸಿರುವ ಸಂಬಂಧ ಮೇ-2024 ಮತ್ತು ಜೂನ್-2024ರ ಮಾಹೆಯ ರೂ.23,71,781/-ಗಳನ್ನು (ಇಪ್ಪತ್ತಮೂರು ಲಕ್ಷದ ಎಪ್ಪತ್ತೊಂದು ಸಾವಿರದ ಏಳುನೂರ ಎಂಭತ್ತೊಂದು ರೂಪಾಯಿಗಳು ಮಾತ್ರ) (ಜಿಎಸ್‌ಟಿ ಮತ್ತು ಸೇವಾ ತೆರಿಗೆ ಮತ್ತು ಸ್ವಚ್ಛತಾ ಸಾಮಾಗ್ರಿಗಳು ಸೇರಿದಂತೆ) ಪಾವತಿಸುವಂತೆ ಕೋರಿರುತ್ತಾರೆ.

...2..

ಓದಲಾಗಿರುವ ಕ್ರಮ ಸಂಖ್ಯೆ(3)ರಲ್ಲಿ ಮೆ:ಏಷಿಯನ್ ಸೆಕ್ಯೂರಿಟಿ ಅಂಡ್ ಪರ್ಸನಲ್ ಅರೇಂಜ್‌ಮೆಂಟ್ಸ್, ಬೆಂಗಳೂರು, ಇವರು ಮೇ-2024 ಮತ್ತು ಜೂನ್-2024ರ ಮಾಹೆಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಶಾಸಕರ ಭನವ-1 ಮತ್ತು 5ರ ವ್ಯಾಪ್ತಿಗೆ ಬರುವ ಕೊಠಡಿಗಳು ಮತ್ತು ವರಾಂಡಗಳ ಯಾಂತ್ರೀಕೃತ ಸ್ವಚ್ಛತಾ ಕಾರ್ಯನಿರ್ವಹಣೆ, ಕಾರುಗಳ ಸ್ವಚ್ಛತಾ ಮತ್ತು ಭದ್ರತಾ ಕಾರ್ಯಗಳನ್ನು ನಿರ್ವಹಿಸಿರುವುದಕ್ಕೆ ಸಂಬಂಧಿಸಿದಂತೆ ಸದರಿಯವರುಗಳಿಗೆ ವೇತನ ಪಾವತಿಸಿರುವ ಸಂಬಂಧ ರೂ.23,71,781/-ಗಳನ್ನು (ಇಪ್ಪತ್ತಮೂರು ಲಕ್ಷದ ಎಪ್ಪತ್ತೊಂದು ಸಾವಿರದ ಏಳುನೂರ ಎಂಭತ್ತೊಂದು ರೂಪಾಯಿಗಳು ಮಾತ್ರ) ಗಳಲ್ಲಿ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ಕಟಾಯಿಸಿ ಉಳಿದ ಮೊತ್ತವನ್ನು ಮೆ:ಏಷಿಯನ್ ಸೆಕ್ಯೂರಿಟಿ ಅಂಡ್ ಪರ್ಸನಲ್ ಅರೇಂಜ್‌ಮೆಂಟ್ಸ್, **ಬೆಂಗಳೂರು** ಇವರಿಗೆ ಪಾವತಿಸುವ ಪ್ರಸ್ತಾವನೆಗೆ ಮಾನ್ಯ ಸಭಾಪತಿಯವರು ಅನುಮೋದಿಸಿರುತ್ತಾರೆ.

**ಆದೇಶ ಸಂಖ್ಯೆ:ಕವಿಪ:ಆ-1:27:ಶಾ.ಭ.ಹೊ.ಗು.ವೇತನ:2024**
**ಬೆಂಗಳೂರು, ದಿನಾಂಕ:28.08.2024.**

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಶಾಸಕರ ಭವನ-1 ಮತ್ತು 5 ರ ವ್ಯಾಪ್ತಿಗೆ ಬರುವ ಕೊಠಡಿಗಳು ಮತ್ತು ವರಾಂಡಗಳ ಯಾಂತ್ರೀಕೃತ ಸ್ವಚ್ಛತಾ ಕಾರ್ಯನಿರ್ವಹಣೆ, ಕಾರುಗಳ ಸ್ವಚ್ಛತೆ ಮತ್ತು ಭದ್ರತಾ ಕಾರ್ಯಗಳನ್ನು ನಿರ್ವಹಿಸಿರುವುದಕ್ಕೆ ಸಂಬಂಧಿಸಿದಂತೆ ಸದರಿಯವರುಗಳಿಗೆ ವೇತನ ಪಾವತಿಸಿರುವ ಸಂಬಂಧ ಮೇ-2024 ಮತ್ತು ಜೂನ್-2024ರ ಮಾಹೆಯ ರೂ.23,71,781/-ಗಳನ್ನು (ಇಪ್ಪತ್ತಮೂರು ಲಕ್ಷದ ಎಪ್ಪತ್ತೊಂದು ಸಾವಿರದ ಏಳುನೂರ ಎಂಭತ್ತೊಂದು ರೂಪಾಯಿಗಳು ಮಾತ್ರ) ಗಳಲ್ಲಿ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ಕಟಾಯಿಸಿ ಉಳಿದ ಮೊತ್ತವನ್ನು **ಮೆ:ಏಷಿಯನ್ ಸೆಕ್ಯೂರಿಟಿ ಅಂಡ್ ಪರ್ಸನಲ್ ಅರೇಂಜ್‌ಮೆಂಟ್ಸ್, ಬೆಂಗಳೂರು** ಇವರಿಗೆ ಪಾವತಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಈ ಬಗ್ಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ: "2011-02-103-2-01(051)" ಸಾಮಾನ್ಯ ವೆಚ್ಚಗಳು ಅಡಿಯಲ್ಲಿ ಭರಿಸತಕ್ಕದ್ದು.

ಮಾನ್ಯ ಸಭಾಪತಿಯವರ ಆದೇಶಾನುಸಾರ,

28/8/24
(ಕೆ.ಜಿ.ಶೈಲಜಾಕ್ಷಿ)
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

<u>ಪ್ರತಿಗಳು:</u>

1. ಮಹಾಲೇಖಪಾಲರು (ಎ ಮತು ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಸಭಾಪತಿಯವರ ಆಪ ಕಾರ್ಯದರ್ಶಿಯವರಿಗೆ, ಕವಿಪ.
3. ಕಾರ್ಯದರ್ಶಿಯವರ ಪತ್ರಾಂಕಿತ ಆಪ ಸಹಾಯಕರಿಗೆ, ಕವಿಪ.
4. ಅಪರ ಕಾರ್ಯದರ್ಶಿಯವರ ಆಪ ಸಹಾಯಕರಿಗೆ, ಕವಿಪ.
5. ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಆಡಳಿತ ಶಾಖೆ/ಲೆಕ್ಕಪತ್ರ ಶಾಖೆ/ಗಣಕ ಕೇಂದ್ರ, ಕವಿಪ
6. ಉಪ ಕಾರ್ಯದರ್ಶಿ/ಕ್ಷೇತ್ರಾಧಿಕಾರಿ, ಶಾಸಕರ ಭವನ, ಕವಿಪ.
7. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
8. **ಮೆ: ಏಷಿಯನ್ ಸೆಕ್ಯೂರಿಟಿ ಅಂಡ್ ಪರ್ಸನಲ್ ಅರೇಂಜ್‌ಮೆಂಟ್, #17/1, 2ನೇ ಮಹಡಿ, ಮೊದಲನೇ "ಕೆ" ಬ್ಲಾಕ್, 11ನೇ ಕ್ರಾಸ್, ರಾಜಾಜಿನಗರ, ಬೆಂಗಳೂರು-560 010.**
9. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ.